


ಒಲಿಂಪಿಕ್ಸ್‌ನಲ್ಲಿಯೂ ಕಾಣಬೇಕಿದೆ ಇಂಥ ಸಂಭ್ರಮದ ಗೆಲುವು

# ಮಹಿಳಾ ಹಾಕಿ
## ಅವಮಾನದ ಬಳಿಕ ಸನ್ಮಾನ

ಪ್ರತಿ ಸೋಲು ಹಾಗೂ ಅದರಿಂದಾಗುವ ಅವಮಾನ ಗೆಲುವಿನ ಪಾಠ ಕಲಿಸುತ್ತದೆ ಎನ್ನುವ ಮಾತನ್ನು ಭಾರತ ಮಹಿಳಾ ಹಾಕಿ ತಂಡಕ್ಕೆ ಅನ್ವಯಿಸಬಹುದೇನೊ?

■ ಪ್ರಮೋದ ಕುಲಕರ್ಣಿ

ಒಲಿಂಪಿಕ್ಸ್‌ನಲ್ಲಿ ಎಂಟು ಬಾರಿ ಚಿನ್ನದ ಪದಕ ಗೆದ್ದ ಹೆಗ್ಗಳಿಕೆ ಹೊಂದಿರುವ ಭಾರತ ಪುರುಷರ ಹಾಕಿ ತಂಡದಷ್ಟು ಸಾಧನೆಯ ಹೊಳಪು ವನಿತೆಯರಿಂದ ಮೂಡಿಬಂದಿಲ್ಲ. ಹೀಗಾಗಿ ಈ ತಂಡದಿಂದ ಪದಕದ ನಿರೀಕ್ಷೆಯೂ ಅಷ್ಟಕ್ಕಷ್ಟೇ. ಏಷ್ಯಾದ ರಾಷ್ಟ್ರಗಳಲ್ಲಿ ನಡೆಯುವ ಟೂರ್ನಿಗಳಲ್ಲಿ ಪ್ರಾಬಲ್ಯ ಮೆರೆಯುವ ಭಾರತ ಮಹಿಳಾ ತಂಡ ವಿಶ್ವಕಪ್, ಒಲಿಂಪಿಕ್ಸ್‌ನಂಥ ಪ್ರತಿಷ್ಠಿತ ವೇದಿಕೆಗಳಲ್ಲಿ ಪದಕ ಜಯಿಸಿದ್ದಕ್ಕಿಂತ ನಿರಾಸೆ ಅನುಭವಿಸಿದ್ದೇ ಹೆಚ್ಚು.

ವನಿತೆಯರ ತಂಡ 1980ರ ಮಾಸ್ಕೊ ಒಲಿಂಪಿಕ್ಸ್‌ನಲ್ಲಿ ಆರು ರಾಷ್ಟ್ರಗಳಷ್ಟೇ ಪಾಲ್ಗೊಂಡಿದ್ದ ಹಾಕಿ ಟೂರ್ನಿಯಲ್ಲಿ ನಾಲ್ಕನೇ ಸ್ಥಾನ ಗಳಿಸಿತ್ತು. ಇದಾದ ನಂತರ 2012ರ ಲಂಡನ್ ಒಲಿಂಪಿಕ್ಸ್ ತನಕ ಟೂರ್ನಿಯಲ್ಲಿ ಪಾಲ್ಗೊಳ್ಳಲಿಲ್ಲ. ಹಲವು ಬಾರಿ ಅರ್ಹತೆಯನ್ನೂ ಗಳಿಸಲಿಲ್ಲ. 2016ರಲ್ಲಿ ರಿಯೊ ಡಿ ಜನೈರೊದಲ್ಲಿ ನಡೆದ ಕೂಟದಲ್ಲಿ 12ನೇ ಸ್ಥಾನಕ್ಕೆ ಸಮಾಧಾನ ಪಟ್ಟುಕೊಂಡಿತ್ತು.

ಈ ಎಲ್ಲ ಕಾರಣಗಳಿಂದ ಮಹಿಳಾ ಹಾಕಿ ತಂಡ ನಿರಂತರ ಟೀಕೆ, ಟಿಪ್ಪಣಿಗಳನ್ನು ಎದುರಿಸಬೇಕಾಯಿತು. ಬೆಂಕಿ ಉಂಡೆಯಂಥ ಮಾತಿನ ಚಾಟಿಯ ನಡುವೆಯೂ ಅರಳಿದ ಭಾರತದ ಹಾಕಿ ಆಟಗಾರ್ತಿಯರು 2022ರ ಒಲಿಂಪಿಕ್ಸ್‌ನಲ್ಲಿ ಎಲ್ಲರ ನಿರೀಕ್ಷೆ ಮೀರಿ ಪ್ರದರ್ಶನ ನೀಡಿ ನಾಲ್ಕು ದಶಕದ ಬಳಿಕ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದರು. ಈ ಯಾತ್ರೆಯುದ್ದಕ್ಕೂ ಐರ್ಲೆಂಡ್ ಹಾಗೂ ದಕ್ಷಿಣ ಆಫ್ರಿಕಾ ರಾಷ್ಟ್ರಗಳನ್ನು ಸೋಲಿಸಿದರು. ಹೀಗಾಗಿ ಇದೇ ವರ್ಷ ಪ್ಯಾರಿಸ್‌ನಲ್ಲಿ ನಡೆದ ಒಲಿಂಪಿಕ್ಸ್ ವೇಳೆ ದೊಡ್ಡ ನಿರೀಕ್ಷೆಯೇ ಇತ್ತು. ದುರಂತವೆಂದರೆ ಇತಿಹಾಸ ಮರುಕಳಿಸಿ ಭಾರತ ಮಹಿಳಾ ತಂಡ ಅರ್ಹತೆಯನ್ನೇ ಪಡೆಯಲಿಲ್ಲ.

ಆಗ ಮತ್ತಷ್ಟು ಟೀಕಾಪ್ರಹಾರ ಹರಿದುಬಂದವು. ಆಟಗಾರ್ತಿಯರ ಸಾಮರ್ಥ್ಯ, ತರಬೇತುದಾರರ ನೈಪುಣ್ಯ, ಸಹಾಯಕ ಸಿಬ್ಬಂದಿ ಅಸಹಕಾರ, ಹಾಕಿ ಇಂಡಿಯಾದ ನಡೆ ವಿರುದ್ಧ ಪ್ರಶ್ನೆಗಳು ಎದುರಾದವು. ಒಂದು ಹಂತದಲ್ಲಿ ಆಟಗಾರ್ತಿಯರ ಮಾನಸಿಕ ಸಾಮರ್ಥ್ಯವನ್ನೇ ಒಲಿಂಪಿಕ್ಸ್ ಅನರ್ಹತೆ ವಿಷಯ ಕೊಂದುಹಾಕಿತ್ತು. ಇವುಗಳೆಲ್ಲವನ್ನೂ ಎದುರಿಸಿದ ಹಾಕಿ ತಂಡ ಅವಮಾನದ ಬಳಿಕ ಈಗ ಪ್ರಶಸ್ತಿಯ ಸನ್ಮಾನ ಪಡೆದುಕೊಂಡಿದೆ.

ಕಳೆದ ವಾರ ನಡೆದ ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯ ಎಂಟನೇ ಆವೃತ್ತಿಯಲ್ಲಿ ಭಾರತ ಎರಡನೇ ಬಾರಿ ಚಾಂಪಿಯನ್ ಪಟ್ಟ ಪಡೆದುಕೊಂಡಿದೆ. ಏಷ್ಯಾದ ರಾಷ್ಟ್ರಗಳ ಸಾಮರ್ಥ್ಯ ಪರೀಕ್ಷೆ ನಡೆಸಲು ಏಷ್ಯನ್ ಹಾಕಿ ಫೆಡರೇಷನ್ ಪ್ರತಿ ಎರಡು ವರ್ಷಕ್ಕೊಮ್ಮೆ ಈ ಟೂರ್ನಿ ನಡೆಸುತ್ತದೆ.

14 ವರ್ಷಗಳ ಹಿಂದೆ ಆರಂಭವಾದ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಇದುವರೆಗೆ ಎಂಟು ಬಾರಿ ನಡೆದಿದ್ದು, ಮೂರು ಸಲ ಭಾರತದ ಆಟಗಾರ್ತಿಯರೇ ಟ್ರೋಫಿ ಎತ್ತಿ ಹಿಡಿದಿದ್ದಾರೆ. 2016ರಲ್ಲಿ ಮೊದಲ ಸಲ ಪ್ರಶಸ್ತಿ ಪಡೆದಿದ್ದ ಭಾರತ 2023 ಹಾಗೂ 2024ರಲ್ಲಿ ಟ್ರೋಫಿಯ ಒಡೆಯನಾಗಿದೆ.

ಹಾಕಿ ಆಡುವ ಏಷ್ಯಾದ ಪ್ರಮುಖ ರಾಷ್ಟ್ರಗಳಾದ ಚೀನಾ, ಮಲೇಷ್ಯಾ, ಜಪಾನ್, ದಕ್ಷಿಣ ಕೊರಿಯಾ ಮತ್ತು ಥಾಯ್ಲೆಂಡ್ ಎದುರು ಗೆಲುವು ಸಾಧಿಸಿದೆ. ಒಲಿಂಪಿಕ್ಸ್‌ಗೆ ಅನರ್ಹತೆ ಬಳಿಕ ಆಗಿದ್ದ ಅವಮಾನವನ್ನು ಭಾರತದ ಮಹಿಳಾ ತಂಡ ಚಾಂಪಿಯನ್ಸ್ ಟ್ರೋಫಿ ಗೆಲ್ಲುವ ಮೂಲಕ ಸರಿದೂಗಿಸಿಕೊಳ್ಳುವ ಪ್ರಯತ್ನ ಮಾಡಿದೆ. ಹಾಕಿ ಸಂಸ್ಥೆ ನಡೆಸುವ ಪ್ರಮುಖ ಟೂರ್ನಿಯಲ್ಲಿ ಭಾರತ ಹೆಚ್ಚು ಬಾರಿ ಚಿನ್ನದ ಪದಕ ಜಯಿಸಿದ್ದು ಕೂಡ ಇದೇ ಟೂರ್ನಿಯಲ್ಲಿ. ಎರಡು ಬಾರಿ ರನ್ನರ್ಸ್ ಅಪ್ ಹಾಗೂ ಒಂದು ಸಲ ಮೂರನೇ ಸ್ಥಾನ ಗಳಿಸಿದೆ. ಟೂರ್ನಿಯ ಆತಿಥ್ಯ ವಹಿಸಿದ್ದ ಬಿಹಾರ ಸರ್ಕಾರ ತಂಡದಲ್ಲಿದ್ದ ಪ್ರತಿ ಆಟಗಾರ್ತಿಗೂ ತಲಾ ₹10 ಲಕ್ಷ ಬಹುಮಾನ ಘೋಷಿಸಿ ಬೆನ್ನುತಟ್ಟಿದೆ.

ಭಾರತ ಮಹಿಳಾ ತಂಡ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಮೂರು, ಏಷ್ಯನ್ ಗೇಮ್ಸ್‌ನಲ್ಲಿ ಏಳು, ಏಷ್ಯಾ ಕಪ್‌ನಲ್ಲಿ ಏಳು ಪದಕಗಳನ್ನು ಗೆದ್ದುಕೊಂಡಿದೆ. ಏಷ್ಯಾದ ಹಾಗೂ ಕಾಮನ್‌ವೆಲ್ತ್ ರಾಷ್ಟ್ರಗಳ ನಡುವಿನ ಟೂರ್ನಿಗಳಲ್ಲಿ ಗಮನ ಸೆಳೆಯುತ್ತಿದ್ದರೂ ಚಾಕಚಕ್ಯತೆ, ಪಾದರಸದ ವೇಗ, ಚೆಂಡಿನ ಮೇಲೆ ನಿರಂತರ ನಿಯಂತ್ರಣ ಸಾಧಿಸುವ ಕೌಶಲಗಳು ಮತ್ತಷ್ಟು ರೂಢಿಯಾಗಬೇಕಿವೆ.

ಪ್ರತಿಕ್ರಿಯಿಸಿ: feedback@sudha.co.in